ಕೊಳ್ಳಲಿಕ್ಕೆ ಯಿಷ್ಟಪಟ್ಟಿಳ ಜನಗಳು ತಮ್ಮ ಡಿಪೆಂಚರ್‌ಗಳನ್ನು ಎಷ್ಟೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇಧರಡಿ ರುಜು ಮಾಡಿರುವರ ಗೆ ಕಳುಹಿಸತಕ್ಕದ್ದು.

ಭಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ಏಗಳಾಗಿ ಕೊಡಲ್ಪಡುವದು.

ಎಷ್ಟೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಅಂಚೇ ಇಲಾಖಾ.

ತಾರೀಖು 1ನೇ ಅಕ್ಟೋಬರ್ 1885.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರ ಆಜ್ಞೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸುಗಳು ಸ್ಥಾಪಿಸಲ್ಪಟ್ಟಿರುತ್ತೆ.:—

| ತಾಲ್ಲೂಕು. | | ಅಂಚೆ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು. |
|---|---|---|
| ಕುಣಿಗಲ್ | .. | ಯಲಿಯೂರು. |
| ತುಮಕೂರು | .. | ಪೊನ್ನುಡಿಕೆ. |
| ಡಿಟೋ | .. | ಪ್ರೂರಪಗೆರೆ |
| ಡಿಟೋ | .. | ಕೊಳಾಲ. |

ಬಿ. ಮರಿಗೆಂಗಯ್ಯ, ಅಂಚೆ ಬಕ್ಷಿ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರು 466.

ಅರ್ಜಿದಾರ ಹಯಾತ್‌ಸಾಬಿಯು ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಮೈನರಾದ ಜಮಾಲ್‌ಖಾನನ ಮಗ ಮೈದರ್‌ಖಾನನ ಆಸ್ತಿ ವಿಷಯದಲ್ಲಿ.

ಸದರೀ ಮೈನರಾದ ಮೈದರ್‌ಖಾನನಿಗೆ ಸೋದರಮಾವ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಹಯಾತ್‌ಸಾಬಿಯು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1885ನೇ ಇಸವಿ ಅಕ್ಟೋಬರ್ ತಾರೀಖು 6ರಲ್ಲಿ ಹೊಕರರು ಮಾಡಿರುವದಾಗಿ. ಇದರಿಂದ ನೋಟಿಸ್ ಕೊಡಲಾಗಿಧೆ.

1885ನೇ ಇಸವಿ ಸೆಪ್ಟಂಬರ್ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟ್ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎ. ನರಸಿಂಹ್ಯಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನಂಬರ್ 7. ತಾರೀಖು 30ನೇ ಸೆಪ್ಟಂಬರ್ 1885.

ಇದರಿಂದ ತಿಳಿಯಪಡಿಸುವದೇನಂದರೆ ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿ ಬಾಕೀ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಇವಗಳ ಮಾಲೀಕರಾಗಲೀ ಅಥವಾ ಕ್ರಮರೀತ್ಯಾ ಮೊಖ್ತಾರಿ ಹೊಂದಿದ ಮುತಾಲ್ಲಿಕರಾಗಲಿ

ಾಗಾಯಿತು ಬಂದು ತಿಂಗಳವಳಗಾಗಿ ಸದರೀ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ ಷ್ಟ್ರ ಆಕ್ಟ 85ನೇ ಸೆಕ್ಷನ ಪ್ರಕಾರ ನಾಶ ಪಡಿಸಲ್ಪಡುವದು.

| ಜಿಗ ನ. | ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ. | ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ. | ರಿಜಿಸ್ಟ್ರಿಗೆ ಹಾಜರಾದ ತಾರೀಖು. | ರಿಜಿಸ್ಟ್ರಿದ ತಾರೀಖು. | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು |
|---|---|---|---|---|---|
| 1883—84 .84 1 | ತಿ|| ನರಸೀಪುರ ತಾಲ್ಲೂಕು ಕೆರಹಳ್ಳಿ ಗ್ರಾಮದ ದಾಖಲೆ ಹೊನ್ನೂರು ಹುಂಡಿಯಲ್ಲಿರುವ ಪುಟ್ಟಮ್ಮನ ಲಿಂಗೇಗೌಡನ ಹೆಂಡತಿ ಲಿಂಗಮ್ಮ | ಸದರೀ ತಾಲ್ಲೂಕು ಕೆರಹಳ್ಳಿ ಗ್ರಾಮದಲ್ಲಿರುವ ನಂಜಿಗೌಡನ ಮಕ್ಕಳು ಬನ್ನೂರು ಲಿಂಗೇಗೌಡ-ಸಂತೂರಯ್ಯ ನಿಗೆ ಸಪ | 14ನೇ ಜುಲೈ 1883ನೇ ಇಸವಿ | 14ನೇ ಜುಲೈ 1883ನೇ ಇಸವಿ | 300 ರೂಪಾಯಿನ ಮನೆ ಕ್ರಯ ಪತ್ರ |
| 1883—84 .458 | ತಿ|| ನರಸೀಪುರ ತಾಲ್ಲೂಕು ಹೊಸಆಲಗೋಡುಗ್ರಾಮ ದಾಖಲೆ ಹಳ್ಳಿವರ ಹುಂಡಿಯಲ್ಲಿರುವ ನಿವಾಚಾರದ ಪೊಳ್ಳೇಗೌಡನೊದ್ದೇಗೌಡ | ಸದರೀ ತಾಲ್ಲೂಕು ಕಸಬಾ ನರಸೀಪುರದಲ್ಲಿರುವ ಮೂಗೂರು ಸೀನಪ್ಪ | 13ನೇ ಆಗಸ್ಟ 1883ನೇ ಇಸವಿ | 20ನೇ ಆಗಸ್ಟ 1883ನೇ ಇಸವಿ | 50 ರೂಪಾಯಿನ ಜಮ್ಮೀ ಆಧಾರ ಪತ್ರ |

ಅಬ್ದುಲ್ಖಾದರ್, ಕೆ. ಬಿ. ರಿಜಿಸ್ಟ್ರಾರ್.

## ನಗರ ಡಿವಿಜ್ಞ.

### ನಗರ್ ಡಿವೀಜ್ಞ ಡಿಸ್ಟ್ರಿಕ್ಟ್ ಜಜ್ಜಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಹನುಮಂತ ಪುರಭ್ ಅಪ್ಪಾಜಿ ಯಂಬವನ ವಿಷಯದಲ್ಲಿ—

ಸ್ಯ 1885ನೇ ಇಸವಿ ದಿವಾಳಿ ಕೇಸ್ ನಂಬರ್ 73.

ಪುಕ್ತುಂ.

ಮೇಲ್ಕಂಡ ಹನುಮಂತ ಉರಭ್ ಅಪ್ಪಾಜಿ ಯಂಬವನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜೀ ಆಂಶವು ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟು ರೂಬರೂ ಅರ್ಜಿದಾರನಾದ ಹನುಮಂತ ಪುರಭ್ ಅಪ್ಪಾಜಿ ಯಂಬವನ ಯಮರಿಗೂ ಮತ್ತು ಸದರೀಯವನ ಲೇಣೇದಾರ ಚೊಟ್ಟಿದಾಸನ ಕರೀಗೌಡ ಯಂಬವನ ಯಜುರಿಗೂ ವರ್ಯಾಫ್ತಿ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹನುಮಂತ ಪುರಭ್ ಅಪ್ಪಾಜಿ ಯಂಬವನು ಹೊಂದುವದಕ್ಕೆ ಪಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ತರವಾಗಿಯಾಗಲಿ ವಸ್ತ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಪ ಅವನನ್ನ ನಿಖಾಲಸೆ ಮಾಡಲಾಗಿರುತ್ತೆ ಯಂದು ಇದರಿಂದ ಪುಕ್ತು ಮಾಡಲ್ಪಟ್ಟಿರುತ್ತೆ.

ಸ್ಯ 1885ನೇ ಇಸವಿ ಸೆಪ್ಟಂಬರ್ ತಿಂಗಳು 29ನೇ ತಾರೀಖಿನಲ್ಲಿ ಈ ಕೋರ್ಟು ಮೊದರ ನಮ್ಮದಸ್ತಖತ್ತಿನಿಂ ಕೊಡಲ್ಪಟ್ಟಿತು